

ಕೊರಿಯೋಗ್ರಫಿಯ ಹಿಂದಿರುವ ಉದ್ದೇಶ ಮತ್ತು ಕಾರಣಗಳೇನು, ಅದು ಅವ್ಯಕ್ತವೇ ಅಥವಾ ನೇರವಾಗಿ ಕಥೆ ಹೇಳುವಿಕೆಯೇ ಎಂಬುದನ್ನು ಅರ್ಥಮಾಡಿಕೊಂಡು ಕಲಿಯಬೇಕಾಗುತ್ತದೆ. ಒಂದು ಕೃತಿಯನ್ನು ಕೈಗೆತ್ತಿಕೊಂಡರೆ ಅದರ ಬಗ್ಗೆ ಸಾಕಷ್ಟು ಆಲೋಚನೆ ಮಾಡಿ, ಅದನ್ನೊಂದು ಯಶಸ್ವಿ ಪ್ರದರ್ಶನವನ್ನಾಗಿಸಲು ಸಂಪೂರ್ಣ ಶ್ರಮಹಾಕುತ್ತೇವೆ. ಆದರೆ ಶ್ರಮಹಾಕಿದ್ದೇವೆ ಎಂದ ಮಾತ್ರಕ್ಕೆ ಎಲ್ಲವೂ ಯಶಸ್ವಿಯಾಗಬೇಕು ಎಂದೇನಿಲ್ಲ. ನಾನೇ ರೂಪಿಸಿದ ಕೆಲವು ಕೃತಿಗಳು ಅನೇಕ ಬಾರಿ ನನಗೇ ಇಷ್ಟವಾಗಿದ್ದಿಲ್ಲ. ಹಾಗೆಂದು ಅದನ್ನು ಬದಲಾಯಿಸಿ ಸರಿಪಡಿಸಿದರೂ, ಮನಸ್ಸಿಗೆ ತೃಪ್ತಿಯಾಗುವುದೂ ಇಲ್ಲ. ಕೊನೆಗೆ ಆ ಕೃತಿಯಿಂದ ಸ್ವಲ್ಪ ದೂರವೇ ಉಳಿದುಬಿಡಲು ನಿರ್ಧರಿಸುತ್ತೇವೆ. ಕೆಲವೊಮ್ಮೆ ಹೀಗೆಂದುಕೊಂಡಿದ್ದೇನೆ: ನಾನು ಮಾಡಿದ ಕೊರಿಯೋಗ್ರಫಿ ಚೆನ್ನಾಗಿದೆ; ಆದರೆ ಒಂದಷ್ಟು ಜನರಿಗೆ ಅದು ಇಷ್ಟವಾಗಿರಲಿಕ್ಕಿಲ್ಲ.... ಈ ಪ್ರಕ್ರಿಯೆ ತಿರುಗುಮುರುಗೂ ಆಗಿರಬಹುದು.

ವೇದಿಕೆಯ ಮೇಲೆ ಒಂದು ಕೃತಿಯನ್ನು ಪ್ರಸ್ತುತಪಡಿಸುವಾಗ, ನಾವು ಆ ಪ್ರದೇಶದ ಗಾತ್ರವೆಷ್ಟು ಎಂಬುದನ್ನು ಗಣನೆಗೆ ತೆಗೆದುಕೊಳ್ಳಬೇಕು. ಜೊತೆಗೆ, ವಿಷಯಕ್ಕೆ ಅನುಗುಣವಾಗಿ ವೇಷಭೂಷಣದ ಬಣ್ಣಗಳನ್ನೂ ಸೂಕ್ತವಾಗಿ ಹೊಂದಾಣಿಕೆ ಮಾಡಿಕೊಳ್ಳಬೇಕು. ಇತ್ತೀಚೆಗೆ ನಾವು ಬೆಳಕಿನ ಪರಿಣಾಮಗಳನ್ನೂ ಅಭಿವ್ಯಕ್ತಿ ಮಾಧ್ಯಮವಾಗಿ ತೆಗೆದುಕೊಳ್ಳುವುದರಿಂದ ಅವುಗಳನ್ನೂ ಗಣನೆಗೆ ತೆಗೆದುಕೊಳ್ಳಬೇಕು. ಜೊತೆಗೆ, ವಿಷಯಕ್ಕೆ ಅನುಗುಣವಾಗಿ ವೇಷಭೂಷಣದ ಬಣ್ಣಗಳನ್ನೂ ಸೂಕ್ತವಾಗಿ ಹೊಂದಾಣಿಕೆ ಮಾಡಿಕೊಳ್ಳಬೇಕು. ಅದೃಷ್ಟವಶಾತ್ ನನ್ನ ಆಲೋಚನೆಗಳನ್ನು ಅರ್ಥಮಾಡಿಕೊಳ್ಳುವ ಬೆಳಕಿನ ವಿನ್ಯಾಸಗಾರರೊಬ್ಬರು ನನಗೆ ಪ್ರೋತ್ಸಾಹ ನೀಡಿದ್ದರಿಂದ ನಾನು ಅಂದುಕೊಂಡದ್ದನ್ನು ವೇದಿಕೆ ಮೇಲೆ ತರುವುದು